ಇದರಲ್ಲಿ ಡಿಪಾಸಿಟ್ ಮಾಡಬೇಕೆನ್ನುವ ಬಗ್ಗೆ ಸರ್ಕಾರ ಈಗಾಗಲೇ ಆದೇಶ ಕೊಟ್ಟಿರುವುದರಿಂದ ಅವರು ಅದನ್ನು ಮಾಡುತ್ತಾರೆ. ಭೂಸ್ವಾಧೀನ ಪಡಿಸಿಕೊಂಡಿರುವ ಜಮೀನುಗಳಲ್ಲಿ ತರಿ ಮತ್ತು ಖುಷ್ಕಿ ಭೂಮಿಗೆ ಮಾರುಕಟ್ಟೆ ದರದ ಆಧಾರದ ಮೇಲೆಯೇ ನಿಗದಿಪಡಿಸಲಾಗುತ್ತಿದೆ.

ಶ್ರೀ ಜಿ. ರಾಜುಗೌಡ : ಹೆದ್ದಾರಿ ನಿರ್ಮಾಣ ಕಾರ್ಯ ಪೂರ್ಣಗೊಂಡಾಗ ರಸ್ತೆ ಮೇಲೆ ಏಕಕಾಲದಲ್ಲಿ ಎಷ್ಟು ವಾಹನಗಳು ಸಂಚರಿಸುವುದಕ್ಕೆ ಸಾಧ್ಯವಿದೆ? ಹಾಗೂ ಉಪನಗರಗಳನ್ನು ಎಲ್ಲೆಲ್ಲಿ ನಿರ್ಮಾಣ ಮಾಡುತ್ತೀರೆಂದು ತಿಳಿಸಬೇಕು.

ಶ್ರೀ ಧರ್ಮ್‌ಸಿಂಗ್ : ಉಪ ನಗರಗಳನ್ನು ಬಿಡದಿ, ರಾಮನಗರ ಹಾಗೂ ಶ್ರೀರಂಗಪಟ್ಟಣದ ಬಳಿ ನಿರ್ಮಾಣ ಮಾಡುತ್ತಿದ್ದು ಇದಕ್ಕೆ ಸರ್ಕಾರದಿಂದ ಒಪ್ಪಿಗೆ ನೀಡಲಾಗಿರುತ್ತದೆ.

ಉಡುಪಿ ಜಿಲ್ಲೆಯಲ್ಲಿ ಶಾಶ್ವತ ಹಾಗೂ ತಾತ್ಕಾಲಿಕ ಸಮುದ್ರ ತಡೆಗೋಡೆಗೆ ಅನುದಾನ

448 - ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) : ಮಾನ್ಯ ಬಂದರು, ಮೀನುಗಾರಿಕೆ ಹಾಗೂ ಪ್ರದೇಶಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ಜಿಲ್ಲೆಯಲ್ಲಿ ಶಾಶ್ವತ ಹಾಗೂ ತಾತ್ಕಾಲಿಕ ಸಮುದ್ರ ತಡೆಗೋಡೆ ಎಷ್ಟು ಕಾಮಗಾರಿಗಳು ಮಂಜೂರಾಗಿದೆ?

ಆ) ಎಷ್ಟು ಅನುದಾನ ಬಂದಿದೆ ಹಾಗೂ ಬಿಡುಗಡೆ ಗೊಂಡಿದೆ (ಅಂಶವಾರು ವಿವರ ನೀಡುವುದು)

ಇ) ಯಾವ ಸ್ಥಳಗಳಲ್ಲಿ ಶಾಶ್ವತ ತಡೆಗೋಡೆ ನಿರ್ಮಿಸಲು ಮಂಜೂರಾತಿ ನೀಡಲಾಗಿದೆ.

ಈ) ಎಷ್ಟು ಕಾಮಗಾರಿಗಳಿಗೆ ಹಣ ಪಾವತಿಯಾಗದೇ ಬಾಕಿ ಉಳಿದಿರುತ್ತವೆ?

ಶ್ರೀ ಬಿ. ರಮಾನಾಥ ರೈ (ಬಂದರು, ಮೀನುಗಾರಿಕೆ ಹಾಗೂ ಪ್ರದೇಶಾಭಿವೃದ್ಧಿ ಸಚಿವರು) :

ಅ) 2000-2001ನೇ ಸಾಲಿನಲ್ಲಿ ಶಾಶ್ವತ ಸಮುದ್ರ ತಡೆಗೋಡೆ ಕಾಮಗಾರಿಗಳು ಮಂಜೂರಾಗಿರುವುದಿಲ್ಲ. ಉಡುಪಿ ಜಿಲ್ಲೆಯ 19 ಸ್ಥಳಗಳಲ್ಲಿ ತಾತ್ಕಾಲಿಕ ಸಮುದ್ರ ತಡೆಗೋಡೆ ಕಾಮಗಾರಿಗಳು ಮಂಜೂರಾಗಿರುತ್ತವೆ.

ಆ) 2000-2001ನೇ ಸಾಲಿನಲ್ಲಿ ರೂ. 135.83 ಲಕ್ಷ ಅನುದಾನವಿದ್ದು ರೂ. 151.07 ಲಕ್ಷ ಬಿಡುಗಡೆಯಾಗಿದೆ.

ಇ) ಇಲ್ಲ. (ಪ್ರಸ್ತಾವನೆಗೆ ಕೇಂದ್ರ ಸರ್ಕಾರದ ಮಂಜೂರಾತಿ ಕಾಯಲಾಗುತ್ತಿದೆ)

ಈ) 123 ಕಾಮಗಾರಿಗಳಿಗೆ ಹಣ ಪಾವತಿಯಾಗದೆ ಉಳಿದಿರುತ್ತವೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಮಾನ್ಯ ಅಧ್ಯಕ್ಷರೆ, ಉಡುಪಿ ಜಿಲ್ಲೆಯಲ್ಲಿ ಸಮುದ್ರ ತಡೆಗೋಡೆ ಸಂಬಂಧ ಕಾಮಗಾರಿ ಕೈಗೊಳ್ಳಲು 2000-2001ನೇ ಸಾಲಿನಲ್ಲಿ ರೂ. 151.07 ಲಕ್ಷ ಬಿಡುಗಡೆಯಾಗಿದೆಯೆಂದು ಉತ್ತರದಲ್ಲಿ ಮಾನ್ಯ ಸಚಿವರು ತಿಳಿಸಿದ್ದಾರೆ. ಬಿಡುಗಡೆಗೊಂಡಿರುವ ಹಣ ಶಾಶ್ವತ ತಡೆಗೋಡೆಯನ್ನು ನಿರ್ಮಿಸುವುದಕ್ಕಾಗಿಯೇ? ಅಥವಾ ತಾತ್ಕಾಲಿಕ ತಡೆಗೋಡೆ ನಿರ್ಮಿಸುವುದಕ್ಕಾಗಿಯೇ ಎಂಬುದನ್ನು ತಿಳಿಸಬೇಕು. ಶಾಶ್ವತ ತಡೆಗೋಡೆ ನಿರ್ಮಿಸುವ ಪ್ರಸ್ತಾವನೆಗೆ ಕೇಂದ್ರ ಸರ್ಕಾರದ ಮಂಜೂರಾತಿಗಾಗಿ ಕಾಯಲಾಗುತ್ತಿದೆಯೆಂದು ತಿಳಿಸಿರುವುದರಿಂದ ಪ್ರಸ್ತಾವನೆ ತಯಾರಾದದ್ದು ಯಾವಾಗ? ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಯಾವಾಗ ಹೋಗಿದೆ ಎಂಬುದನ್ನು ತಿಳಿಸಬೇಕು. ಹಾಗೂ 123 ಕಾಮಗಾರಿಗಳಿಗೆ ಹಣ ಪಾವತಿಯಾಗದೆ ಉಳಿದಿರುತ್ತವೆ ಎಂದು ಹೇಳಿರುವುದಕ್ಕೆ ಕಾಮಗಾರಿಗಳಿಗೆ ಹಣ ಪಾವತಿಯಾಗದೆ ಉಳಿದಿರುವುದು ಇಡೀ ಕರಾವಳಿಯಲ್ಲಿಯೇ? ಅಥವಾ ಉಡುಪಿ ಜಿಲ್ಲೆಯಲ್ಲಿಯೇ? ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕು.

ಶ್ರೀ ಬಿ. ರಮಾನಾಥ ರೈ : ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಸದಸ್ಯರ ಪ್ರಶ್ನೆಗೆ ಉತ್ತರವನ್ನು ಕೊಡಲಾಗಿದೆ. ವಾಸ್ತವವಾಗಿ ಅದಕ್ಕೆ 135.83 ಲಕ್ಷ ರೂಪಾಯಿಗಳನ್ನು ಇಟ್ಟಿರತಕ್ಕದ್ದು. ಆದರೆ ಬಿಡುಗಡೆ ಮಾಡಿದ್ದು 151.7 ಲಕ್ಷ ರೂಪಾಯಿಗಳು ಅಂದರೆ ಹೆಚ್ಚಾಗಿಯೇ ಹಣವನ್ನು ಬಿಡುಗಡೆ ಮಾಡಲಾಗಿದೆ. ತಾತ್ಕಾಲಿಕವಾಗಿ ತಡೆಗೋಡೆಯನ್ನು ನಿರ್ಮಾಣ ಮಾಡಲು ಈ ಹಣವನ್ನು ಬಿಡುಗಡೆ ಮಾಡಲಾಗಿದೆ. ಇದರಲ್ಲಿ ಉಡುಪಿ ಜಿಲ್ಲೆಯಲ್ಲಿ 123 ಕಾಮಗಾರಿಗಳು ಬರುತ್ತದೆ, ಇದರ ಅಂದಾಜು 3 ಕೋಟಿ ರೂಪಾಯಿಗಳಾಗುತ್ತದೆ. ಇದರ ಬಗ್ಗೆ 141 ಕೋಟಿ ರೂಪಾಯಿಗಳ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಈಗಾಗಲೇ ನಾವು ಕಳಿಸಿಕೊಟ್ಟಿದ್ದೇವೆ. ಇದರಲ್ಲಿ ಕೇಂದ್ರ ಸರ್ಕಾರ 75 ಪರ್ಸೆಂಟ್ ರಾಜ್ಯ ಸರ್ಕಾರ 25 ಪರ್ಸೆಂಟ್ ಹಣವನ್ನು ಭರಿಸುತ್ತದೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಕೇಂದ್ರ ಸರ್ಕಾರಕ್ಕೆ ಯಾವಾಗ ಹೋಗಿದೆ?

ಶ್ರೀ ಬಿ. ರಮಾನಾಥ ರೈ : ತಮಗೆ ಗೊತ್ತಿರುವಂತೆ ಇದು ನಮ್ಮ ಇಲಾಖೆಗೆ ಹಸ್ತಾಂತರವಾಗಿದೆ. ಇದರ ಬಗ್ಗೆ ಅನಂತರ ಪರಿಶೀಲನೆ ಮಾಡಿ ಹೇಳುತ್ತೇನೆ.

ಅಧ್ಯಕ್ಷರು : ಮಾನ್ಯ ಚನ್ನಿಗಪ್ಪನವರೆ, ತಮ್ಮ ಪ್ರಶ್ನೆಗೆ ಉತ್ತರ ಬಂದಿಲ್ಲ. ಇದನ್ನು ಖಂಡಿತವಾಗಿ ಮುಂದಿನ ಸೋಮವಾರ ತೆಗೆದುಕೊಳ್ಳುತ್ತೇನೆ.

ಬೆಳಗಾಂ ಜಿಲ್ಲೆಯಲ್ಲಿ ನಬಾರ್ಡ್ ಯೋಜನೆಯಡಿ ಮಂಜೂರಾದ ಕಾಮಗಾರಿಗಳ ಬಗ್ಗೆ

450 - ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂ ಜಿಲ್ಲೆಯಲ್ಲಿ ನಬಾರ್ಡ್ ಯೋಜನೆಯಡಿಯಲ್ಲಿ ಇಲ್ಲಿಯವರೆಗೆ ಎಷ್ಟು ಮೊತ್ತದ ಕೆಲಸ ತೆಗೆದುಕೊಳ್ಳಲಾಗಿದೆ? ಮತಕ್ಷೇತ್ರದ ಪ್ರಕಾರ ರಸ್ತೆ ಹಾಗೂ ವಿವರ ನೀಡುವುದು?